‘ಎಂತ ಮರ್ಯಾದೆಲಿ ಲಾಯ್ಕ ಬಟ್ಟೆ ತೊಳಿಯಕೆ ಬತ್ತಾ... ಎರ್ಡ್ ಹೆಂಗ್‌ಸ್ರ್ ಮನೇಲಿ ಕುದ್ದ್‌ಕಂಡ್ ಎಂತ ಕುಮೇರಿ ಕಡ್ದರೆ?’ ದಾಸನ ಬೈಗುಳ ದಿನಾ ಕೇಳಿ ಕೇಳಿ ಕಮಲಕ್ಕನಿಗೆ ಬೊಡಿ ಬಂದು, ಮೆಲ್ಲಗೆ ಸರೋಜಳ ಬಳಿ, ‘ನಿನ್ನ ಭಾವನಿಗೆ ಬಟ್ಟೆ ತೊಳೆದದ್ದು ಸರಿ ಆಗುವುದಿಲ್ಲ, ಸ್ವಲ್ಪ ಕಾಲರ್ ಹತ್ತಿರ ಬ್ರಶ್ ಮುಟ್ಟಿಸು ಅಯ್ತಾ’ ಅಂತ ಆದಷ್ಟು ಮೆತ್ತಗೆ ಸ್ವರದಲ್ಲಿ ಹೇಳಿದ್ದನ್ನ ಕಿವಿಗೂ ತಕೊಳದೆ ಹಾಗೇ ಗಾಳಿಯಲ್ಲೇ ಹಾರಿಸಿ ಬಿಟ್ಟದ್ದಳು. ಕೊನೆ ಕೊನೆಗೆ ಕಮಲಳ ನೈಟಿಗಳು, ರವಿಕೆಗಳು ಬೊಳ್ಳ ಹೋಗಲು ಶುರುವಾದ ಮೇಲೆ ಕಮಲ ತನ್ನ ಮತ್ತು ಗಂಡನ, ಮಾವನ ಬಟ್ಟೆಗಳನ್ನ ತಾನೇ ಎಡೆ ಸಿಕ್ಕುವಾಗಲೋ, ಬಿಸಿನೀರು ಕೊಟಗೆಯಲ್ಲಿ ಮೀಯುವಾಗಲೋ, ಚಿರಿಂಬಿ ಹಾಕುವುದಕ್ಕೆ ಶುರು ಮಾಡಿದ್ದು.

ಸರೋಜಳಿಗೆ, ಅಕ್ಕ ಕಮಲಳ ಉಸ್ತುವಾರಿಯಲ್ಲಿ ತಾನು ಅಡಿಯಾಳಾದಂತೆ ಭಾಸವಾಗುವುದು ಹೆಚ್ಚಾಯಿತು. ತಾನು ಗರ್ಭಿಣಿಯಾದ ಮೇಲಂತೂ ಯಾವ ಕೆಲಸವನ್ನೂ ಮುಟ್ಟದೆ ತವರು ಮನೆಯಲ್ಲಿ ಹೋಗಿ ಠಿಕಾಣಿ ಹೂಡಿ ಗಂಡು ಮಗುವೊಂದನ್ನು ಹೆತ್ತು ಬರುವಾಗ ಹಠ ತೊಟ್ಟು ಹಳ್ಳಕರೆ ಮನೆಗೇ ಬಲಗಾಲಿಟ್ಟದ್ದು.

ಸೊಸೆಯಂದಿರಿಗೆ ಸರಿ ಬರುವುದಿಲ್ಲವೆಂಬುದು ಗೊತ್ತಾದ ಮೇಲೆ ಗೌಡರು ಹೆಚ್ಚು ಮಾತನಾಡಲು ಹೋಗಲಿಲ್ಲ. ಅವರು ಇರುವುದೇ ಹಾಗೇ. ಎಂದಾದರೂ ಒಂದು ದಿನ ಆಸ್ತಿ ಪಾಲುಪಟ್ಟಿ ಆಗಲೇ ಬೇಕಲ್ಲ? ಅದು ಈಗಲೇ, ನಾನಿರುವಾಗಲೇ ಆಗಿ ಹೋದರೆ ಲೇಸೆಂದೆಣಿಸಿ ಹಳ್ಳಕರೆಯ ಮನೆಯನ್ನ, ಆ ಬದಿಯ ಆಸ್ತಿ ವಹಿವಾಟನ್ನು ಸೀನನಿಗೇ ಬಿಟ್ಟು ತಾನು ಹಿರಿಮಗ ಸೊಸೆಯೊಂದಿಗೇ ಉಳಿದು ಬಿಟ್ಟರು. ತಾನು ಕಟ್ಟಿದ ಮನೆಯನ್ನು ಬಿಟ್ಟು ಹೋಗುವುದು ಅವರಿಗೆ ಸುತರಾಂ ಇಷ್ಟವಿಲ್ಲ.

‘ಬಂದರೆ ಇನ್ನಾರೂ ಜವಾಬ್ದಾರಿ ಬಂದದೆ, ಇಲ್ಲೆತೇಳಿರೆ ಎಷ್ಟೂಂತ ಮಡ್‌ಲೊಳಗೆ ಹಾಕಂಡ್ ಕೋಳಿ ಪಿಳ್ಳೆಗಳಂಗೆ ಸಾಂಕಕ್? ಊರುಕೇರಿ ಉಸಾಬರಿ ಬುಟ್ಟು ಹಂಞ ಮೈ ಬಗ್ಗ್‌ಸಿ ದುಡ್‌ದರೆ ಲಾಯ್ಕ ಫಸ್‌ಲ್ ತೆಗಿಯಕ್’ ಅಂತ ಪಾಲುಪಟ್ಟಿ ಮಾಡಲು ಬಂದ ಚಿನ್ನಪ್ಪ ಗೌಡ್ರೊಟ್ಟಿಗ್ಗೆ ಒಂದು ಮಾತು ಹೇಳಿ ಮುಗಿಸಿದ ಮೇಲೆ ಮತ್ತೆ ಆ ಕಡೆ ಮೂಗು ತೂರಿಸಲು ಹೋಗಲಿಲ್ಲ ಅವರು.

ಇಷ್ಟಾದರೂ ಬೇರೆ ಬಿಡಾರಕ್ಕೆ ಒಕ್ಕಲಾದ ಮೇಲೆಯೂ ಸರೋಜಳಿಗೆ ಕಮಲ ಅಂದರೆ ಅಷ್ಟಕ್ಕಷ್ಟೆ. ಸಂಸಾರ ಅಂದಾಕ್ಷಣ ಸಂಬಂಧಿಕರ ಮೇಲೆ ಅದಾವ ರೀತಿಯಲ್ಲಿ ಹೊಟ್ಟೆಕಿಚ್ಚು ಶುರುವಾಗುತ್ತದೋ ದೇವರೇ ಬಲ್ಲ. ಆ ಕಿಚ್ಚು ತಮ್ಮನ್ನೇ ಸುಡುತ್ತದೆ ಅನ್ನುವ ಖದರೇ ಇಲ್ಲದೆ ಹೊಗೆ ಕಾರಿಕೊಂಡೇ ಇರುತ್ತಾರೆ. ಕಷ್ಟ ಸುಖಕ್ಕೆ ನಮ್ಮವರಲ್ಲದೆ ಹೊರಗಿನವರು ಅದೆಷ್ಟು ಬಂದಾರು? ಮದ್ದು ಅರೆಯಲು ಎಲ್ಲರೂ ಇರುತ್ತಾರೆ. ಕೊನೇಗೆ ಕುಡಿಯಲು ಒಬ್ಬರೇ ಅನ್ನುವ ತಿಳಿವಳಿಕೆ ಸರೋಜಳಿಗೆ ಯಾಕೆ ಮೂಡಲಿಲ್ಲವೋ ಗೊತ್ತಿಲ್ಲ. ಕಮಲ ಮಾತ್ರ ಇದಕ್ಕೆಲ್ಲ ತಲೆಕೆಡಿಸಿ ಕೊಂಡವಳೇ ಅಲ್ಲ.

‘ಒಂದು ಮಡಿಕೆಯಿಂದ ಗಂಜಿ ಉಣ್ಣುವಾಗ ಒಂದು ಮಾತು ಬರುತ್ತೆ ಹೋಗುತ್ತೆ. ಅದನ್ನ ಕೊನೇ ತನಕ ಇಟ್ಟುಕೊಂಡು ಹಣಗಾಡುವುದು ಎಂತಕೆ’ ಅನ್ನುವ ಜಾಯಮಾನದವಳು. ಅದೂ ಅಲ್ಲದೆ ಅತ್ತೆಯ ಸ್ಥಾನದ ಜವಾಬ್ದಾರಿಯ ಅನುಭವ ಅವಳನ್ನ ಮತ್ತಷ್ಟು ಮಾಗಿಸಿತ್ತು. ಇಲ್ಲದಿದ್ದರೆ ಅಷ್ಟು ನಿಸೂರಾಗಿ ಹೆಗಲೇರಿದ ಹೊಣೆಯನ್ನು ನಿಭಾಯಿಸುವುದು ಸುಲಭ ಸಾಧ್ಯವಲ್ಲ.

ಯಾರಾದರೂ ಸರೋಜಳ ಕುರಿತು ಕೇವಲವಾಗಿ ಮಾತನಾಡಿದರೂ, ‘ಬಿಡಿ, ಇನ್ನೂ ಎಳೆ ಪ್ರಾಯ. ಅನುಭವ ಸಾಲದು’ ಅಂತ ನಕ್ಕು ಸುಮ್ಮನಾಗುತ್ತಾಳೆಯೇ ಬಿಟ್ಟರೆ ಅದಕ್ಕೆ ಉಪ್ಪುಖಾರ ಹಚ್ಚಿ ಚಪ್ಪರಿಸಲು ಆಕೆ ಬಿಡಲಾರಳು. ಮನೆ ಸಂಗತಿಗಳು ಗೇಟು ದಾಟಿ ಹೋಗಬಾರದು ಅನ್ನುವ ನಿಲುವಿನಲ್ಲೇ ಇಲ್ಲಿ ತನಕ ಸಂಸಾರ ನಡೆಸಿದ್ದಳು. ಆ ಕಾರಣದಿಂದಲೇ ಕಮಲಳಿಗೆ ಯಾರ ಜೊತೆಗೆನೂ ಸಂಬಂಧ ಆರಕ್ಕೂ ಏರುವುದಿಲ್ಲ, ಮೂರಕ್ಕೂ ಇಳಿಯುವುದಿಲ್ಲ.

ಒಟ್ಟಿಗಿರುವಾಗ ಒಂದು ಕೆಲಸವೂ ತಿರುಗಿ ನೋಡದ ಸರೋಜ ಈಗ ಗಟ್ಟಿಗಿತ್ತಿ. ಪಾಲಿಗೆ ಸಿಕ್ಕ ಆಸ್ತಿಯನ್ನು ಸಾಧ್ಯವಾದಷ್ಟು ಮಟ್ಟಿಗೆ ಹಾಳು ಬೀಳದಂತೆ ನೋಡಿಕೊಳ್ಳತೊಡಗಿದಳು. ದಿನವಿಡೀ ಪಿರಿಪಿರಿ ಮಾಡಿ ಸೀನನ ತಿರುಗಾಟಕ್ಕೆ ಕಡಿವಾಣ ಹಾಕಲು ಪ್ರಯತ್ನಿಸುತ್ತಿದ್ದಳು. ಇದೀಗ ಆಕೆಗೆ ಗಂಡು ಮಗುವೊಂದು ಆದ ಮೇಲೆ ಆಸ್ತಿಪಾಸ್ತಿಯ ವ್ಯಾಮೋಹ ಮತ್ತಷ್ಟು ಹೆಚ್ಚಾದದ್ದು. ಕಮಲಕ್ಕನಿಗೆ ಎರಡು ಹೆಣ್ಮಕ್ಕಳೇ. ಮುಂದೊಮ್ಮೆ ಮದುವೆಗಿದುವೆ ಆದ